# <u>ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ</u>

## <u>ಸಿ.ಸಿ.506/2018</u>

<u>ಸಾಕ್ಷಿದಾರರ ಹೇಳಿಕೆಃ</u>

**ಹೆಸರು** : ಎಂ ಆರ್ ಗುರುಬಸಪ್ಪ ಚಾಸಾಃ **20** ಪ್ರಾಸಾಃ **10**

**ತಂದೆಯ ಹೆಸರು** : ಎಂ ರುದ್ರಪ್ಪ

**ವಯಸ್ಸು** : 49 ವರ್ಷ

**ವೃತ್ತಿ** : ಮುಖ್ಯ ಪೇದೆ

**ವಾಸಸ್ಥಳ** : ಬಸವಪಟ್ಟಣ

ದಿನಾಂಕಃ **10-02-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದ:-</u>

ನಾನು ದಿಃ 21-05-2015 ರಿಂದ ದಿಃ 23-06-2022 ರವರೆಗೆ ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆ ಆಗಿ ಕರ್ತವ್ಯ ನಿರ್ವಹಿಸಿದ್ದೇನು.

ದಿಃ 29-08-2017 ರಂದು ಚಾಸಾ-22 ರವರ ಆದೇಶದ ಮೇರೆಗೆ ಮೃತ ಸಿದ್ದಲಿಂಗಯ್ಯನ ಶವಗಾವಲನ್ನು ಮಾಡಿದ್ದು ಮತ್ತು ಮೃತನ ಶವಪಂಚನಾಮೆಯನ್ನು ಮಾಡಿದ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆದು, ಅದೇ ದಿನ ಸ್ಥಳ ಮಹಜರ್ ಮಾಡುವ ಸಮಯದಲ್ಲಿ ಛಾಯಾಚಿತ್ರಗಳನ್ನು ತೆಗೆದಿರುತ್ತೇನೆ.

ದಿಃ 30-08-2017 ರಂದು ವಾಹನ ಪಂಚನಾಮೆಯ ಸಮಯದಲ್ಲಿ ಛಾಯಾಚಿತ್ರಗಳನ್ನು

ತೆಗೆದಿರುತ್ತೇನೆ. ಸದರಿ ಛಾಯಾಚಿತ್ರಗಳನ್ನು ತೆಗೆದ ಬಗ್ಗೆ 65 ಬಿ ಪ್ರಮಾಣ ಪತ್ರವನ್ನು ಚಾಸಾ-23 ರವರಿಗೆ ಕೊಟ್ಟಿರುತ್ತೇನೆ. ನಂತರ ಮೃತನ ಪಿ ಎಂ ವರದಿ ಆದ ನಂತರ ಮೃತ ದೇಹವನ್ನು ಚಾಸಾ-1 ರವರಿಗೆ ಹಸ್ತಾಂತರಿಸಿರುತ್ತೇನೆ.

ನಿಪಿ-3 ಮತ್ತು 29, ನಿಪಿ-5 ಮತ್ತು 19, 20, 22 ರಿಂದ 25 ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 65 ಬಿ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು:- ಆರೋಪಿ ಪರ ವಕೀಲರರಿಂದ:-</u>

ನಾನು ಛಾಯಾಚಿತ್ರವನ್ನು ತೆಗೆಯಲು ತರಬೇತಿಯನ್ನು ಪಡೆದುಕೊಂಡಿರುತ್ತೇನೆ. ಛಾಯಾಚಿತ್ರಗಳನ್ನು ರೀಗಲ್ ಪೋಟೋ ಸ್ಟೂಡಿಯೋ ಹೊನ್ನಾಳಿಯಲ್ಲಿ ಪ್ರಿಂಟ್ ತೆಗೆಸಿರುತ್ತೇನೆ. ಛಾಯಾಚಿತ್ರಗಳನ್ನು ಸ್ಟೂಡಿಯೋದಲ್ಲಿ ಪ್ರಿಂಟ್ ತೆಗೆದಿರುವ ಬಗ್ಗೆ ಬಿಲ್ ಅನ್ನು ಹಾಜರುಪಡಿಸಿರುವುದಿಲ್ಲ. ನಾನು ಯಾವುದೇ ಛಾಯಾಚಿತ್ರವನ್ನು ತೆಗೆಯದಿದ್ದರೂ ಸಹ ನಮ್ಮ ಮೇಲಾಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಶುದ್ಧ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.